ಆ) ಆಂದಿನ ಕಂದಾಯ ಸಚಿವರ ಪ್ರಕಾರ ಪ್ರತಿ ಕ್ಷೇತ್ರಕ್ಕೆ 2.50 ಲಕ್ಷ ಹಣ ಬಿಡುಗಡೆ ಮಾಡಿರುವುದಾಗಿ ಎಲ್ಲಾ ಶಾಸಕರಿಗೂ ಪತ್ರದ ಮುಖೇನ ತಿಳುವಳಿಕೆಯನ್ನು ನೀಡಿರುವುದು ನಿಜವೇ?

ಇ) ಆದರಂತೆ ಬಿಡುಗಡೆಯಾದ ಹಣ ಮತ್ತು ಖರ್ಚಾದ ಹಣವೆಷ್ಟು?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ರಾಜ್ಯ ಸಚಿವರು):-

ಆ) ರೂ. 1,93, 400-00ಗಳು

ಆ) ಈ ಪತ್ರದಲ್ಲಿ ಸೂಚಿಸಿರುವುದು 1994-95ರಲ್ಲಿ ಬಿಡುಗಡೆ ಮಾಡಿದ ಮೊತ್ತ.

ಇ) 1995-96ರಲ್ಲಿ ರೂ. 1,93,400-00 ಗಳನ್ನು ದಿನಾಂಕ:31-7-96ರಂದು ಬಿಡುಗಡೆ ಮಾಡಿರುವುದರಿಂದ ಆ ಹಣ ಇನ್ನು ಖರ್ಚಾಗಿರುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ:- ಸಭಾಧ್ಯಕ್ಷರೆ, ನನ್ನ ಪ್ರಶ್ನೆಗೆ ನನ್ನ ಕ್ಷೇತ್ರದಲ್ಲಿ 1995-96ನೇ ಸಾಲಿಗೆ ಬಿಡುಗಡೆಯಾದ ಹಣ ಎಷ್ಟು ಎಂದು ಕೇಳಿದ್ದೇನೆ. ಅದಕ್ಕೆ ಅವರು 1,93,400 ರೂಪಾಯಿ ಹಣ ಬಿಡುಗಡೆಯಾಗಿದೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ದಯಮಾಡಿ ಒಂದು ಪ್ರಶ್ನೆ ಕೇಳುತ್ತೇನೆ. ಇದು 95-96ನೇ ಸಾಲಿಗೆ 1994-95ನೇ ಸಾಲಿಗೆ ನಿಗದಿಯಾಗಿದ್ದಂಥ ಹಣ ಎಷ್ಟು? ಬಿಡುಗಡೆಯಾಗಿದ್ದೆಷ್ಟು ಮತ್ತು 95-96ನೇ ಸಾಲಿಗೆ ನಿಗದಿಯಾಗಿದ್ದೆಷ್ಟು, ಬಿಡುಗಡೆಯಾಗಿದ್ದು ಎಷ್ಟು ಎಂದು ದಯಮಾಡಿ ಹೇಳುತ್ತೀರಾ?

ಶ್ರೀ ಮುನಿಯಪ್ಪ ಮುದ್ದಪ್ಪ:- ಮಾನ್ಯ ಉಪಾಧ್ಯಕ್ಷರೆ ಆರಾಧನಾ ಯೋಜನೆಯೂ ಸಹಿತ 1991-92ನೇ ಸಾಲಿನಲ್ಲಿ ಪ್ರಾರಂಭವಾಯಿತು. ಈ ಆರಾಧನಾ ಯೋಜನೆಯು ಸರ್ಕಾರದ ಜನೋಪಯೋಗಿ ಕಾರ್ಯಕ್ರಮಗಳಲ್ಲಿ ಒಂದಾಗಿದೆ. ಮಾನ್ಯ ಸದಸ್ಯರು ಕೇಳಿದ ಪ್ರಕಾರ ನಮಗೆ ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೂ ಇಂತಿಷ್ಟು ಹಣ ಎಂದು ನಿಗದಿ ಮಾಡಿರುವುದಿಲ್ಲ. ಆಯಾ ವರ್ಷದ ಆಯವ್ಯಯದಲ್ಲಿ ಒದಗಿಸತಕ್ಕಂಥ ಹಣವನ್ನು ಪ್ರತಿ ವಿಧಾನಸಭಾ ಕ್ಷೇತ್ರಕ್ಕೂ ಹಂಚಲಾಗುತ್ತದೆ. ಆದರಂತೆ 1994-95ರಲ್ಲಿ 6 ಕೋಟಿ 71 ಲಕ್ಷ ರೂಪಾಯಿಗಳನ್ನು ಒದಗಿಸಿತ್ತು. ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೆ 2 ಲಕ್ಷ 64 ಸಾವಿರ ರೂಪಾಯಿ ಬರುತ್ತಾ ಇದೆ. ಆದರಂತೆ 1995-96ರಲ್ಲೂ ಸಹಿತ 4 ಕೋಟಿ 50 ಲಕ್ಷ ರೂಪಾಯಿ ಸರ್ಕಾರ ಒದಗಿಸಿತ್ತು. ಅದನ್ನೂ ಸಹ ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೆ ಒಂದು ಲಕ್ಷ 93 ಸಾವಿರ ರೂಪಾಯಿ ಬರುತ್ತಾ ಇದೆ. ಇದು ಏನೆಂದರೆ ಆಯಾವರ್ಷದ ಆಯವ್ಯಯದಲ್ಲಿ ಕೊಟ್ಟಿರತಕ್ಕಂಥ ಹಣವನ್ನು ಮಾತ್ರ ನಾವು ಹಂಚುತ್ತಿದ್ದೇವೆ. ಹಿಂದೆ ಆರಾಧನಾ ಯೋಜನೆ ಸ್ಥಗಿತಗೊಂಡಿತ್ತು. ಈಗ 31-7-96ರಲ್ಲಿ ನಾವು ಹಣ ಬಿಡುಗಡೆ ಮಾಡಿದೆವು. ನಮ್ಮ ಧರ್ಮ ದತ್ತಿ ಆಯುಕ್ತರು ಇದನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸಿದ್ದಾರೆ ಎನ್ನ ತಕ್ಕ ವಿಷಯವನ್ನು ಮಾನ್ಯ ಸದಸ್ಯರಿಗೆ ನಾನು ಹೇಳುವುದನ್ನು ಇಚ್ಛಿಪಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ:- 1995-96ನೇ ಸಾಲಿನಲ್ಲಿ ತಾವು 1,93,000 ರೂಪಾಯಿಗಳನ್ನು ಬಿಡುಗಡೆ ಮಾಡಿದಿರಿ. ನಿಗದಿ ಮಾಡಿದ್ದ ಅಮೌಂಟ್ ಆಷ್ಟೇ. ಬಿಡುಗಡೆಯಾಗಿದ್ದುದು ಯಾವತ್ತು ಅಂದರೆ 31-7-96ರಲ್ಲಿ.

3.40 ಪಿ.ಎಂ

ಅಂದರೆ ನಮಗೆ ಹಿಂದಿನ ಸಚಿವರು ಕಾಗದ ಬರೆದಿದ್ದರು ಎರಡೂವರೆ ಲಕ್ಷ ರೂಪಾಯಿಗಳನ್ನು ನಿಮ್ಮ ಕ್ಷೇತ್ರಕ್ಕೆ ಬಿಡುಗಡೆ ಮಾಡಿದ್ದೇನೆಂದು. ಹಣ ಯಾವತ್ತೋ ಬರುವುದಾದರೆ, ಪ್ರಯೋಜನವೇನು? ಆಯಾ ವರ್ಷಕ್ಕೆ ಏನು ಹಣವನ್ನು ನಿಗದಿ ಮಾಡಿರುತ್ತಾರೋ ಅದು ಆಯಾಯ ವರ್ಷದಲ್ಲೇ ಬಿಡುಗಡೆಯಾದರೆ ಅದು ಪ್ರಯೋಜನವಾಗುತ್ತದೆ. ದಯಮಾಡಿ ನಾವು ಜನಗಳಿಗೆ ಸುಳ್ಳು ಹೇಳಿದರೂ ಪರವಾಗಿಲ್ಲ. ಆದರೆ, ದೇವರುಗಳಿಗೆ ಸುಳ್ಳು ಹೇಳುವುದು ಬೇಡ.

ಶ್ರೀ ಮುನಿಯಪ್ಪ ಮುದ್ದಪ್ಪ:- ಸುಳ್ಳು ಹೇಳತಕ್ಕದ್ದು ಏನೂ ಇಲ್ಲ. ತಡವಾಗಿ ಹಣ ಬಂದಿದ್ದರಿಂದ ತಡವಾಗಿ ಬಿಡುಗಡೆ ಮಾಡಿದ್ದೇವೆ. ನಿಮ್ಮ ಜಿಲ್ಲಾಧಿಕಾರಿಗಳ ಹತ್ತಿರ ಹಣವಿದೆ. ಆದರ ಬಗ್ಗೆ ವಿವರಣೆ ಕೊಟ್ಟು ಹಣವನ್ನು ಒದಗಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ:- ತಡವಾಗಿ ಬಿಡುಗಡೆ ಮಾಡಿದ್ದಕ್ಕೆ ಸುಳ್ಳು ಎಂದು ಹೇಳುವುದು. ನಾನು ಈಗ ಒಂದು ಕಡೆ ಸಲಹೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಆರಾಧನಾ ಸಮಿತಿಯಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಎಂಜಿನಿಯರ್ ಜಿಲ್ಲಾ ಪಂಚಾಯಿತಿಯವರೂ ಕೂಡ ಸಮಿತಿಯಲ್ಲಿ ಸದಸ್ಯರಾಗಿರುತ್ತಾರೆ. ಅವರು ತಾಂತ್ರಿಕವಾಗಿ ಒಂದು ಅಂದಾಜು ಪಟ್ಟಿಯನ್ನು ಮಾಡಿದ ಸಂದರ್ಭದಲ್ಲಿ ಆಡಳಿತಾತ್ಮಕ ಮಂಜೂರಾತಿಗೆ ಇವತ್ತು ಜಿಲ್ಲಾಧಿಕಾರಿಗಳಿಗೆ ಕಳುಹಿಸುತ್ತೇವೆ. ಕಳುಹಿಸಿದಾಗ ಬಹಳಷ್ಟು ತಡವಾಗುತ್ತದೆ. ಆ ಕಾರಣಕ್ಕೋಸ್ಕರ ಆ ಅಧಿಕಾರವನ್ನು ತಹಶೀಲ್ದಾರ್ ಅವರಿಗೆ ವಹಿಸಿ ಆಡಳಿತಾತ್ಮಕ ಮಂಜೂರಾತಿಯನ್ನು ಕೊಡತಕ್ಕದ್ದನ್ನು ನೇರವಾಗಿ ತಹಶೀಲ್ದಾರ್‌ಗೆ ಕೊಡತಕ್ಕದ್ದು ಒಂದು, ಎರಡನೆಯದು ನೇರವಾಗಿ ನೀವು ಸರ್ಕಾರದಿಂದ ಹಣವನ್ನು ಏನು ಬಿಡುಗಡೆ ಮಾಡುತ್ತೀರಿ ಕ್ಷೇತ್ರವಾರು ಅದು ನೇರವಾಗಿ ತಹಶೀಲ್ದಾರ್‌ಗೆ ಹೋಗತಕ್ಕದ್ದನ್ನು ನೀವು ಮಾಡಿದರೆ ಬಹುಶಃ ಇದರಲ್ಲಿ ಆಗತಕ್ಕ ವಿಳಂಬ ತಪ್ಪುತ್ತದೆ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ದಯಮಾಡಿ ತಾವು ಆ ಕೆಲಸ ಮಾಡುತ್ತೀರೋ?

ಶ್ರೀ ಮುನಿಯಪ್ಪ ಮುದ್ದಪ್ಪ:- ಮಾನ್ಯ ಉಪಾಧ್ಯಕ್ಷರೆ, ತಮ್ಮ ಸಮ್ಮುಖದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಜಿಲ್ಲಾಧಿಕಾರಿಗಳು ವಿಳಂಬ ಮಾಡುವುದು ಉಂಟು. ಆದು ನನ್ನ ಗಮನಕ್ಕೆ ಸಹ ಬಂದಿದೆ. ನೀವು ಹೇಳಿದಂತಹ ಸಲಹೆ ಬಹಳ ಚೆನ್ನಾಗಿದೆ. ಇದನ್ನೂ ಸಹ ನಾನು ತಹಶೀಲ್ದಾರ್‌ರವರ ಸಮಕ್ಷಮದಲ್ಲಿಯೇ ಮಾಡುವಂತಹ ವ್ಯವಸ್ಥೆಯನ್ನು ಮಾಡಿಸುತ್ತೇನೆಂದು ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಉಪಾಧ್ಯಕ್ಷರೆ, 1995–96ನೇ ಸಾಲಿನಲ್ಲಿ ಸುಮಾರು 6 ಕೋಟಿ ಇಟ್ಟಿದ್ದೇವೆಂದು ಹೇಳಿದಿರಿ. ತದನಂತರ ಬಂದಿರತಕ್ಕದ್ದು 4 ಕೋಟಿ. 1996-97ಕ್ಕೆ ಎಷ್ಟು ಇಟ್ಟಿದ್ದೀರಿ ಎಂಬುದು ನಮಗೆ ಗೊತ್ತಿಲ್ಲ. ಸರ್ಕಾರ ಅಂದರೆ ನೀವೇ. 1996-97ನೇ ಸಾಲಿಗೆ ಕನಿಷ್ಟ 10 ಕೋಟಿಯನ್ನಾದರೂ ಕೊಡುತ್ತೀರೋ?

ಶ್ರೀ ಮುನಿಯಪ್ಪ ಮುದ್ದಪ್ಪ:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರಿಗೆ ನಾನು ಹೇಳಲಿಕ್ಕೆ ಬಯಸುತ್ತೇನೆ. ನಾನು ಈ ಸಲ ಹೆಚ್ಚಿನ ಹಣದ ವ್ಯವಸ್ಥೆಯನ್ನು ಮಾಡಿ ಈ ಯೋಜನೆ ಯಶಸ್ವಿಯಾಗಿ ಆಗಲಿಯೆಂದು ಹೇಳಿ, ಇನ್ನು ಹೆಚ್ಚಿನ ಅನುದಾನವನ್ನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುತ್ತಾ ಅದನ್ನು ನಾನು ಕಾರ್ಯರೂಪಕ್ಕೆ ತರಲಿಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ:- ದೇವರು ನಿಮಗೆ ಒಳ್ಳೆಯದು ಮಾಡಲಿ.

ಶ್ರೀ ಬಿ.ಎಸ್. ಪಾಟೀಲ್:- ಮಾನ್ಯ ಉಪಾಧ್ಯಕ್ಷರೆ, ನಾನು ಪ್ರಶ್ನೆಯನ್ನು ಕೇಳಿದ್ದೆ ಅದು ಅನ್‌ಸ್ಟಾರ್ಡ್ ಆಗಿ ಬಂದಿದೆ. ಬಿಜಾಪುರ ಜಿಲ್ಲೆಯ ತಾಲ್ಲೂಕುವಾರು ವಿವರಗಳನ್ನು ಕೇಳಿದ್ದೆ. 1995-96ನೇ ಸಾಲಿನಲ್ಲಿ ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ ಎಂದು? ಅದರಲ್ಲಿ ಬಿಜಾಪುರ ಜಿಲ್ಲೆಗೆ 11 ಲಕ್ಷ 65 ಸಾವಿರ ರೂಪಾಯಿ ಬಿಡುಗಡೆ ಮಾಡಿದ್ದರೆ ನಮ್ಮ ಬೀಳಗಿ ತಾಲ್ಲೂಕಿಗೆ 35 ಸಾವಿರ ರೂಪಾಯಿ ಖರ್ಚು ಮಾಡಿದ್ದಾರೆ.

ಉಪಾಧ್ಯಕ್ಷರು:- ಮಾನ್ಯ ಸದಸ್ಯರು ಹೀಗೆ ಪ್ರಶ್ನೆ ಕೇಳಿದರೆ ಮಂತ್ರಿಗಳ ಹತ್ತಿರ ಮಾಹಿತಿ ಇರಬೇಕಲ್ಲಾ! ಹಾಗೆ ಉತ್ತರ ಕೊಡಲಿಕ್ಕೆ ಬರುವುದಿಲ್ಲ. ಅವರು ಕೇಳಿದ ಪ್ರಶ್ನೆ ಬೇರೆ ನೀವು ಕೇಳಿದ ಪ್ರಶ್ನೆ ಬೇರೆ. ಅವರ ಹತ್ತಿರ ಮಾಹಿತಿ ಇರಲಿಲ್ಲವೆಂದರೆ ಅವರು ಉತ್ತರ ಕೊಡುವುದು ಹೇಗೆ?

ಶ್ರೀ ಬಿ.ಎಸ್. ಪಾಟೀಲ್:- ಈ ಹಣವನ್ನು ಜಿಲ್ಲಾಧಿಕಾರಿಗಳ ಹತ್ತಿರ ಇಡುವ ಬದಲು ಹಣವನ್ನು ತಹಶೀಲ್ದಾರ್‌ರವರಿಗೆ ನೇರವಾಗಿ ಜಮಾ ಮಾಡಿಬಿಟ್ಟರೆ ಆ ತಾಲ್ಲೂಕಿನಲ್ಲಿ ಖರ್ಚು ಮಾಡಲಿಕ್ಕೆ ಅನುಕೂಲವಾಗುತ್ತದೆ. ದಯಮಾಡಿ ಇದರ ಬಗ್ಗೆ ಸರ್ಕಾರ ಆಶ್ವಾಸನೆಯನ್ನು ಕೊಡಬೇಕು.

ಶ್ರೀ ಮುನಿಯಪ್ಪ ಮುದ್ದಪ್ಪ:- ಮಾನ್ಯ ಉಪಾಧ್ಯಕ್ಷರೆ, ಈಗತಾನೇ ಹೇಳಿದೆನಲ್ಲ ಮಾನ್ಯ ಜಯಚಂದ್ರರವರು ಹೇಳಿದ ಪ್ರಕಾರ ತಹಶೀಲ್ದಾರ್‌ರವರಿಗೆ ನೇರವಾಗಿ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆಂದು.

ವಿಷಯ:- ಧಾನ್ಯ ವರ್ತಕರಿಂದ ಸೆಸ್ಸ್ ವಸೂಲಾತಿ.

371 (2149) **ಶ್ರೀಮತಿ ಪ್ರಮೀಳ ನೇಸರ್ಗಿ (ಚಾಮರಾಜಪೇಟೆ):-** ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1988ನೇ ಆಗಸ್ಟ್ 4 ರಂದು ಸರ್ಕಾರದವರು ಎಸ್‌ಎಂಡಿ 202 ಎಂಆರ್‌ಡಿ 87ನೇ ಸಂಖ್ಯೆಯ ಅಧಿಸೂಚನೆಯೊಂದನ್ನು ಹೊರಡಿಸಿರುವ ಸಂಗತಿಯು ನಿಜವಲ್ಲವೇ?

ಆ) ಹಾಗಿದ್ದಲ್ಲಿ ಸದರಿ ಅಧಿಸೂಚನೆಯ ಮೇರೆಗೆ ಧಾನ್ಯ ವರ್ತಕರು ಹಾಗೂ ಬೇಳೆಕಾಳುಗಳ ವರ್ತಕರ ಸಂಘ, ಬೆಂಗಳೂರು, ಇವರು ಸದರಿ ಅಧಿಸೂಚನೆಯ ರೀತ್ಯ ಬೇಳೆಕಾಳುಗಳ ಮಾರಾಟದ ಮೇಲೆ ರಾಜ್ಯ ಸರ್ಕಾರಕ್ಕೆ ಶೇಕಡ 2ರಷ್ಟು ಸೆಸ್ಸನ್ನು ನೀಡಬೇಕಿತ್ತಲ್ಲವೇ?